**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಓಎಸ್ ನಂ. 223/2013**

**ಡಿಡಬ್ಲ್ಯೂಃ 1**

**ದಿನಾಂಕಃ14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂವಿ ಆರ್ ರವರಿಂದಃ**

**ಪ್ರತಿವಾದಿಗೆ ಕನ್ನಡ ಭಾಷೆ ಮಾತನಾಡಲು ಬರದೇ ಇದ್ದ ಕಾರಣ ತೆಲುಗು ಭಾಷೆಗೆ ತರ್ಜುಮೆ ಮೊಡಲು ಕುಮಾರಿ ಡಿಎನ್ ವಕೀಲರನ್ನು ತರ್ಜುಮೆದಾರನ್ನಾಗಿ ನೇಮಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಸರ್ವೆನಂಬರ್ 36/1 ಒಟ್ಟು 5 ಎಕರೆ 31 ಗುಂಟೆ ಇದೆ ಎಂದರೆ ಸರಿ. ಅದರಲ್ಲಿ 3 ಎಕರೆ 10 ಗುಂಟೆಯನ್ನು ವಾದಿ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯ ಜಮೀನನ್ನು ನಾನು ನೋಡಿರುವುದಿಲ್ಲ. ನಮ್ಮ ಜಮೀನು ಸರ್ವೆ ನಂಬರ್ 36/2, 1 ಎಕರೆ 1 ಗುಂಟೆ. ನನ್ನ ತಂದೆ 10 ಗುಂಟೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1 ಎಕರೆ 1 ಗುಂಟೆಗೆ ಚೆಕ್ಕುಬಂದಿ ಪೂರ್ವಕ್ಕೆ ಮುನಿವೆಂಕಟಪ್ಪ, ಪಶ್ಚಿಮಕ್ಕೆ ಸರ್ವೆನಂಬರ್ 39 ಬೀಡು ಇದೆ, ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ, ಉತ್ತರಕ್ಕೆ ಮುನಿವೆಂಕಟರೆಡ್ಡಿ, ಅದರಲ್ಲಿ ಮಾವಿನ ಗಿಡಗಳು ಇವೆ, ದಕ್ಷಿಣದ ಕಡೆ 4 ನೇ ಪ್ರತಿವಾದಿ ಎಎನ್. ನಾರಾಯಣಗೌಡ. ನಾನು 2007 ರಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಕ್ರಯಪತ್ರದಲ್ಲಿ ಚೆಕ್ಕುಬಂದಿಯನ್ನು ಬರೆಸಿರುತ್ತೇನೆ.

ನಿಡಿ 2 ರಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ಮುನಿವೆಂಕಟಪ್ಪ, ಪಶ್ಚಿಮಕ್ಕೆ ವಾದಿ ಲಕ್ಷ್ಮಣರೆಡ್ಡಿ ಎಂದು ಬರೆಸಿರುತ್ತೇನೆ ಅದರ ಸರ್ವೆನಂಬರ್ 39, ಉತ್ತರಕ್ಕೆ ಮುನಿವೆಂಕಟಾರೆಡ್ಡಿ, ದಕ್ಷಿಣಕ್ಕೆ ನಾರಾಯಣಗೌಡ ಮತ್ತು ವಾದಿ ಲಕ್ಷ್ಮಣರೆಡ್ಡಿ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಡಿ 2 ರಲ್ಲಿನ ಚೆಕ್ಕುಬಂದಿಯನ್ನು ನಾನೇ

ಬರೆಸಿರುತ್ತೇನೆ ಎಂದರೆ ಸರಿ. ನಮ್ಮ ಜಮೀನಿನ ಪಶ್ಚಿಮದ ಕಡೆ ವಾದಿಗೆ ಸೇರಿದ ಮಾವಿನ ತೋಪು ಇದೆ ಎಂದರೆ ಸರಿಯಲ್ಲ. ಒಂದು ಹಳೆ ಬಾವಿ ಕೂಡಾ ಇದೆ ಎಂದರೆ ಗೊತ್ತಿಲ್ಲ. 2008 ರಲ್ಲಿ ನಾನು ಖರೀದಿಸಿದ ಸ್ವತ್ತಿನ ದಕ್ಷಿಣಕ್ಕೆ ನನ್ನ ತಂದೆ 10 ಗುಂಟೆ ಖರೀದಿಸಿರುತ್ತಾರೆ ಎಂದರೆ ಸರಿ. ವಾದಿಯ ಜಮೀನಿನ ಪಶ್ಚಿಮಕ್ಕೆ ಬೆಸ್ತರ ಪುಟ್ಟಪ್ಪ ಮತ್ತು ವೆಂಕಟಸ್ವಾಮಿ ಜಮೀನು ಇದೆ ಎಂದರೆ ಗೊತ್ತಿಲ್ಲ. ವಾದಿಯ ಜಮೀನು ಆದ ನಂತರ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಬೇರೆ ಸ್ವತ್ತು ಇದೆ ಎಂದರೆ ಸರಿ. ನಾರಾಯಣಗೌಡ ಆದ ನಂತರ 4 ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ನಾರಾಯಣಪ್ಪ, ಕೊಂಡಪ್ಪ, ಗೋವಿಂದಪ್ಪರವರ ಜಮೀನು ಇದೆ ಎಂದರೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ಜಮೀನಿನ ಉತ್ತರಕ್ಕೆ ಮುನಿವೆಂಕಟರೆಡ್ಡಿರವರ ಜಮೀನು ಎಂದರೆ ಗೊತ್ತಿಲ್ಲ. ಈ ಮೇಲೆ ಹೇಳಿದ ಚೆಕ್ಕುಬಂದಿಯಲ್ಲಿ ವಾದಿಯ 3 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಸುಮಾರು 10-15 ವರ್ಷಗಳಿಂದ ಮಾವಿನ ಪಸಲು ಇದೆ ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ಖರೀದಿಸಿದ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಮುನಿವೆಂಕಟಪ್ಪ, ಪಶ್ಚಿಮಕ್ಕೆ ಇದೇ ಸರ್ವೆ ನಂಬರ್ ನ ಉಳಿಕೆ ಸ್ವತ್ತು ಎಂದು ಬರೆಸಿರುತ್ತೇನೆ ಎಂದರೆ ಸರಿ. ಇದೇ ಸರ್ವೆ ನಂಬರ್ ಎಂದರೆ ಸರ್ವೆ ನಂಬರ್ 36. ಪಶ್ಚಿಮಕ್ಕೆ ವಾದಿಯ ಜಮೀನು ಇದ್ದರೂ ಸುಳ್ಳು ಚೆಕ್ಕುಬಂದಿಯನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 2 ರ ಕ್ರಯ ಪತ್ರದಲ್ಲಿ ಪಶ್ಚಿಮಕ್ಕೆ ವಾದಿಯ ಜಮೀನು ಎಂದು ತೋರಿಸಿದ್ದು, ನನ್ನ ಪ್ರಮಾಣ ಪತ್ರದಲ್ಲಿ ಪಶ್ಚಿಮಕ್ಕೆ ಇದೇ ಸರ್ವೆ ನಂಬರ್ ಸ್ವತ್ತಿನ ಉಳಿಕೆ ಸ್ವತ್ತು ಎಂದು ಬರೆಸಿದ್ದು, ಎರಡರಲ್ಲಿ ಪ್ರಮಾಣಪತ್ರದಲ್ಲಿ ಬರೆಸಿರುವುದು ಸರಿಯಾಗಿರುತ್ತದೆ, ಕ್ರಯಪತ್ರದಲ್ಲಿ ಇರುವುದು ಸುಳ್ಳು ಎಂದರೆ ಬೇರೆ ಸರ್ವೆ ನಂಬರ್ ಇರುವುದಾಗಿ ನುಡಿದಿರುತ್ತಾರೆ.

ಸರ್ವೆ ನಂಬರ್ 36 ರಲ್ಲಿ 1 ಎಕರೆ 14 ಗುಂಟೆ ಪೈಕಿ 1 ಎಕರೆ 1 ಗುಂಟೆ ಖರೀದಿ ಮಾಡಿರುತ್ತೇನೆ. ಉಳಿಕೆ 13 ಗುಂಟೆ ಜಮೀನು ಯಾರಿಗೆ ಹೋಗಿದೆ ಎಂದರೆ ಗೊತ್ತಿಲ್ಲ. ನಾನು ಖರೀದಿ ಮಾಡಿದ ನಂತರ

ಇಲ್ಲಿಯವರೆಗೂ ಸರ್ವೆ ಮಾಡಿಸಿರುವುದಿಲ್ಲ. ಸರ್ವೆ ನಂಬರ್ 36, ಸರ್ವೆ ನಂಬರ್ 36 /1 ಮತ್ತು ಸರ್ವೆ ನಂಬರ್ 36/2 ಎಂದು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 36/1, 3 ಎಕರೆ 10 ಗುಂಟೆ ವಾದಿಗೆ ಆಗಿರುತ್ತದೆ ಎಂದರೆ ಗೊತ್ತಿಲ್ಲ, ಸರ್ವೆ ನಂಬರ್ 36/2, 1 ಎಕರೆ 1 ಗುಂಟೆ ನನಗೆ ಆಗಿರುತ್ತದೆ ಎಂದರೆ ಸರಿ. ಖರೀದಿ ಮಾಡಿದ ನಂತರ ನಾನೇ ಸರ್ವೆ ಮಾಡಿಸಿರುತ್ತೇನೆ ಎಂದರೆ ಸರಿ. ನಾನು ಖರೀದಿ ಮಾಡುವ ಸಮಯಕ್ಕೆ ಅದರಲ್ಲಿ ಮಾವಿನ ಪಸಲು ಇತ್ತು. ಖರೀದಿ ಮಾಡುವಾಗ ಕ್ರಯಪತ್ರದಲ್ಲಿ ಮಾವಿನ ಪಸಲು ಇತ್ತು ಎಂಬುದನ್ನು ತೋರಿಸಿಲ್ಲ. ನಾನು ಖರೀದಿಸಿರುವ 1 ಎಕರೆ 1 ಗುಂಟೆ ಮತ್ತು ನನ್ನ ತಂದೆ ಖರೀದಿಸಿರುವ 10 ಗುಂಟೆ ಹೊರತುಪಡಿಸಿ ಈ ಸರ್ವೆ ನಂಬರ್ ನಲ್ಲಿನ ಬೇರೆ ಸ್ವತ್ತಿಗೆ ನನಗೆ ಹಕ್ಕು, ಸ್ವಾಧೀನ ಇರುವುದಿಲ್ಲ ಎಂದರೆ ಸರಿ.

ವಾದಿ ಸರ್ವೆ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ನನಗೆ, ಆಜುಬಾಜುದಾರರಿಗೆ ನೋಟೀಸ್ ಅನ್ನು ನೀಡಿದ್ದರು ಎಂದರೆ ಸರಿಯಲ್ಲ. ಸರ್ವೆಯರ್ ಬಂದು ಸರ್ವೆ ಮಾಡಿರುತ್ತಾರೆ ಎಂದರೆ ಗೊತಿಲ್ಲ. ಸರ್ವೆ ಮಾಡುವಾಗ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಸರ್ವೆ ಮಾಡುವ ಪೂರ್ವದಲ್ಲಿ 2010 ರಲ್ಲಿ ವಾದಿ ಇಲ್ಲದಿದ್ದಾಗ ಅವರ ಸ್ವತ್ತಿನ ಪಶ್ಚಿಮದ ಕಡೆ ಅತಿಕ್ರಮ ಮಾಡಿ ಮಾವಿನ ಗಿಡಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು 20 ವರ್ಷಗಳಿಂದ ಮಾವಿನ ಗಿಡ ಇರುವುದಿಲ್ಲ, 2010 ರಲ್ಲಿ ವಾದಿಯ ಸ್ವತ್ತನ್ನು ಒತ್ತುವರಿ ಮಾಡಿ, ಮಾವಿನ ಗಿಡಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೇರಿದ 1 ಎಕರೆ 10 ಗುಂಟೆ ಹೊರತುಪಡಿಸಿ ಉಳಿದ ಸ್ವತ್ತಿಗೆ ನನಗೆ ಹಕ್ಕು ಇರುವುದಿಲ್ಲ. ಪಂಚಾಯಿತಿಯಲ್ಲಿ ನಾನು ಒತ್ತುವರಿ ಮಾಡಿರುವುದನ್ನು ಒಪ್ಪಿಕೊಂಡು ಬಿಟ್ಟುಕೊಡುವುದಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಒಪ್ಪಿಕೊಂಡಂತೆ, ಸರ್ವೆ ಮಾಡಿಸಿದ್ದು, ಅದರಲ್ಲಿ ನಾನು 13 ಗುಂಟೆ ಒತ್ತುವರಿ ಮಾಡಿರುವುದಾಗಿ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ಮಾಡಿಸಿ ಅದರಲ್ಲಿ ವಾದಿಗೆ ಸೇರಿದ 13 ಗುಂಟೆ ನಮ್ಮ ಜಮೀನಿನಲ್ಲಿ ಇರುವುದಾಗಿ ಕಂಡು ಬಂದರೆ ಬಿಟ್ಟು ಕೊಡುತ್ತೀರಾ ಎಂದರೆ ಬಿಟ್ಟು ಕೊಡುತ್ತೇನೆ. ನ್ಯಾಯಾಲಯದ ಮೂಲಕ ಆಯುಕ್ತರನ್ನು

ನೇಮಿಸಿ ಸರ್ವೆ ಮಾಡಿಸಲು ನನ್ನ ಆಕ್ಷೇಪಣೆ ಇರುವುದಿಲ್ಲ. ಸರ್ವೆ ವರದಿಯಲ್ಲಿ ಒತ್ತುವರಿ ಮಾಡಿರುವುದಾಗಿ ಬಂದರೆ ಬಿಟ್ಟು ಕೊಡುತ್ತೀರಾ ಎಂದರೆ ಸರ್ವೆ ಸ್ಕೆಚ್ ನಲ್ಲಿ ಇರುವಷ್ಟು ನನ್ನ ಸ್ವತ್ತು ಎಂದು ನುಡಿದಿರುತ್ತಾರೆ. ವಾದಿಯ 13 ಗುಂಟೆ ಸ್ವತ್ತನ್ನು ಒತ್ತುವರಿ ಮಾಡಿ ಅಕ್ರಮ ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.** )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/-
(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು